## 56

# "ಕರ್ತನೇ ನಮಗೆ ಪ್ರಾರ್ಥಿಸುವದನ್ನು ಕಲಿಸು"

## ಲೂಕ 11:1-13, ಒಂದು ನಿಕಟ ನೋಟ

ಬೋಧನೆಯನ್ನು ಪ್ರಸಂಗವನ್ನು ಹಾಗೂ ಚಿತ್ರಪಟಗಳ ಮೂಲಕ ಕಲಿಸಬೇಕೆಂದು, ಅನೇಕರು ನನಗೆ ಮನವಿ ಮಾಡಿದ್ದಾರೆ. ಹೀಗೆ ಬರೆಯಬೇಕು ಬೋಧಿಸುವ ಸಾಮಾಗ್ರಿಗಳನ್ನು ಹೇಗೆ ಹೊಂದಿಸಬೇಕು ಎಂದು ಕೇಳಿರುತ್ತಾರೆ. ಆದರೆ ಯಾರು ಸಹ "ಡೇವಿಡ್‌ರವರೇ ನಮಗೆ ಪ್ರಾರ್ಥಿಸುವದನ್ನು ಕಲಿಸಿರಿ" ಎಂದು ಕೇಳಿರುವದಿಲ್ಲ. ಆದರೆ ಈ ವಿಧವಾದ ಮನವಿಯನ್ನು ಅಪೊಸ್ತಲರು ಯೇಸುವಿನಲ್ಲಿ ಮಾಡಿದರು: "ಆತನು ಒಂದಾನೊಂದು ಸ್ಥಳದಲ್ಲಿ ಪ್ರಾರ್ಥನೆ ಮಾಡಿ ಮುಗಿಸಿದಾಗ ಆತನ ಶಿಷ್ಯರಲ್ಲಿ[1] ಒಬ್ಬನು ಆತನಿಗೆ, ಸ್ವಾಮಿ ಯೋಹಾನನು ತನ್ನ ಶಿಷ್ಯರಿಗೆ ಕಲಿಸಿದ ಹಾಗೆ ನಮಗೂ ಪ್ರಾರ್ಥನೆ ಮಾಡುವದನ್ನು ಕಲಿಸು ಎಂದು ಕೇಳಿದನು" (ಲೂಕ 11:1).

ಪ್ರಾರ್ಥನೆಯ ಕುರಿತಾದ ಕೆಲವು ವಿವರಗಳನ್ನು ಅಪೊಸ್ತಲರು ಅರಿತಿದ್ದರು. "ಅವರು ತಮ್ಮ ಮಂದಿರದಲ್ಲಿ ಪ್ರಾರ್ಥನೆಯನ್ನು ಬಾಯಿಪಾಠವನ್ನು ಮಾಡಿದ್ದರು.[2] ಅವರು ರಬ್ಬಿಯರ ಪ್ರಾರ್ಥನೆಯನ್ನು ಅರಿತಿದ್ದರು. ಅದನ್ನು ಯಾಜಕರು ಪುನರಾವರ್ತನೆ ಮಾಡುತ್ತಿದ್ದರು, ಅದನ್ನು ಫರಿಸಾಯರು ಗಟ್ಟಿಯಾದ ಧ್ವನಿಯಿಂದ ಹೇಳುತ್ತಿದ್ದರು.[3] "ಆದರೆ ಯೇಸು ಮಾಡುತ್ತಿದ್ದ ಪ್ರಾರ್ಥನೆಯಲ್ಲಿ ವ್ಯತ್ಯಾಸವಿತ್ತು. ಆತನು ಅರಣ್ಯಕ್ಕೆ ಪ್ರತ್ಯೇಕವಾಗಿ ಹೋಗಿ ಪ್ರಾರ್ಥಿಸುವದನ್ನು ಕಂಡಿದ್ದರು" (ಲೂಕ 5:16). ಆತನು, "ಬೆಟ್ಟಕ್ಕೆ ಹೋಗಿ ಪ್ರಾರ್ಥಿಸಿದನು" (ಮತ್ತಾಯ 14:23) "ಆತನು ರಾತ್ರಿ ಎಲ್ಲಾ ಪ್ರಾರ್ಥನೆಯಲ್ಲಿ ಕಳೆದನು" (ಲೂಕ 6:12). ಕೆಲವು ಮುಂಜಾನೆ ಅವರು ಎಚ್ಚರವಾದಾಗ ಯೇಸು ಆ ಸ್ಥಳದಲ್ಲಿ ಇರುತ್ತಿರಲಿಲ್ಲ. ಆತನು ಮೊಣಕಾಲೂರಿರುವದನ್ನು ಅವರು ಗಮನಿಸುತ್ತಿದ್ದರು (ನೋಡಿರಿ ಮಾರ್ಕ 1:35-37ಎ). ಕರ್ತನ ಪ್ರಾರ್ಥನೆಯ ಪರಿಣಾಮವನ್ನು ಸಹ ಗಮನಿಸಿದ್ದರು. ಮೊಣಕಾಲೂರಿ ತಂದೆಯೊಂದಿಗೆ ಪ್ರಾರ್ಥಿಸಿ ಎದ್ದ ನಂತರ, ಆತನಲ್ಲಿ ಹೊಸ ಬಲ, ಹಾಗೂ ಚೈತನ್ಯವನ್ನು ಕಾಣುತ್ತಿದ್ದರು. ಆದ್ದರಿಂದ ಅವರು "ನಮಗೂ ಪ್ರಾರ್ಥಿಸುವದನ್ನು ಕಲಿಸು" ಎಂದು ಮನವಿ ಮಾಡಿದರು.

ವಚನ 2ರಿಂದ 13ರ ವಾಕ್ಯ ಭಾಗದಲ್ಲಿ ಯೇಸು ನೀಡಿದ ಪ್ರತಿಕ್ರಿಯೆಯನ್ನು ಗಮನಿಸುತ್ತೇವೆ. ಆತನು ಪ್ರಾರ್ಥನೆಯ ಕುರಿತು ಎಲ್ಲವನ್ನು ತಿಳಿಸದೆ, ಪ್ರಾರ್ಥನೆಯನ್ನು ಬಯಸುವವರ ಅಗತ್ಯಕ್ಕೆ ಯೋಗ್ಯವಾದ ಆಲೋಚನೆಗಳನ್ನು ನೀಡಿರುವನು.

### ಪ್ರಾರ್ಥಿಸುವವರಾಗಿರ್ರಿ (ವಚನಗಳು 2-4)

ಮೊದಲನೆಯದಾಗಿ ಆತನು "ಪರಲೋಕದ ಪ್ರಾರ್ಥನೆಯನ್ನು" ಕಲಿಸಿದನು:

> ನೀವು ಪ್ರಾರ್ಥಿಸುವಾಗ, ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ. ನಿನ್ನ ರಾಜ್ಯವು ಬರಲಿ. ನಮ್ಮ ಅನುದಿನದ ಆಹಾರವನ್ನು ಪ್ರತಿದಿನವೂ ದಯಪಾಲಿಸು, ನಮಗೆ ತಪ್ಪುಮಾಡಿರುವ ಪ್ರತಿಯೊಬ್ಬನನ್ನು ನಾವು ಕ್ಷಮಿಸುತ್ತೇವಾದ್ದರಿಂದ ನಮ್ಮ ಪಾಪಗಳನ್ನು ಕ್ಷಮಿಸು. ನಮ್ಮನ್ನು ಶೋಧನೆಯೊಳಗೆ ಸೇರಿಸಬೇಡ ಎಂದು ಹೇಳಿರಿ ಅಂದನು (ವಚನಗಳು 2-4).

ಇದನ್ನು "ಶಿಷ್ಯರ ಪರಿಪೂರ್ಣವಾದ ಪ್ರಾರ್ಥನೆ" ಅಥವಾ "ಒಂದು ಮಾದರಿ ಪ್ರಾರ್ಥನೆ

ಎಂದು ಕರೆಯಬಹುದು. ಪರ್ವತ ಪ್ರಸಂಗದಲ್ಲಿ "ಈ ಪ್ರಾರ್ಥನೆಯ ಸವಿವರವನ್ನು ಕಾಣಬಹುದು" (ಮತ್ತಾಯ 6:9-15).[4] ಇದನ್ನು ಅನುಸರಿಸಿ ನಾವುಗಳು ದೇವರನ್ನು ಸಮೀಪಿಸಬಹುದಾಗಿದೆ.[5]

ಇಲ್ಲಿ ದೇವರನ್ನು *ತಂದೆಯೆಂದು* ಕರೆಯಬಹುದು:[6] ಪ್ರಾರ್ಥನೆಯು, "ತಂದೆಯು" ನಾಮದಲ್ಲಿ ಆರಂಭಗೊಳುತ್ತದೆ.

ಆತನು *ದೈವೀಕ* ವ್ಯಕ್ತಿಯಾಗಿದ್ದಾನೆ: "ನಿನ್ನ ನಾಮವು ಪರಿಶುದ್ಧವೆಂದು" ಎಣಿಸಲ್ಪಡಲಿ. ಆತನ ನಾಮ ಪರಿಶುದ್ಧವಾಗಿದೆ. ದಶಾಜ್ಞೆಯ ಮೂರನೆಯ ಆಜ್ಞೆಯು, "ನಿನ್ನ ದೇವರಾದ ಯೆಹೋವನ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತಬಾರದು" (ವಿಮೋಚನಕಾಂಡ 20:7ಎ). ದೇವರನ್ನು ಗೌರವಿಸುವದೇ ಪ್ರಾರ್ಥನೆಯ ಪ್ರಥಮ ಅಂಶವಾಗಿರಬೇಕು.

ಆತನು *ಸಾರ್ವಭೌಮನೆಂದು* ತಿಳಿದು ಆತನ ಬಳಿ ಬರುತ್ತೇವೆ: "ನಿನ್ನ ರಾಜ್ಯವು ಬರಲಿ" ಜನರ ಜೀವನ ಹಾಗೂ ಹೃದಯದಲ್ಲಿ ಇರುವ ದೇವರ ರಾಜ್ಯದ ಆಳ್ವಿಕೆಯಾಗಿರುತ್ತದೆ. ಶಿಷ್ಯರು ಪಂಚಾಶತ್ತಮದ ಹಿಂದೆ ಪ್ರಾರ್ಥಿಸಿದಂತೆ "ನಿನ್ನ ರಾಜ್ಯವು ಬರಲಿ" ಎಂದು ಪ್ರಾರ್ಥಿಸಲು ಸಾಧ್ಯವಿಲ್ಲ.[7] ಆದರೆ ಎಲ್ಲಾ ಸ್ಥಳಗಳಲ್ಲಿ ಜನರು ಆತನನ್ನು ದೇವರಾದ ಅರಸನು ಎಂದು ಘೋಷಿಸಲಿ.

*ದಯಪಾಲಿಸುವ* ದೇವರ ಬಳಿ ಬರುತ್ತೇವೆ: "ನಮ್ಮ ಅನುದಿನದ ಆಹಾರವನ್ನು ದಯಪಾಲಿಸು." ನಮ್ಮ ಆಹಾರಕ್ಕಾಗಿ ನಾವುಗಳು ದುಡಿಯಬೇಕು (2 ಥೆಸಲೋನಿಕ 3:10), ಆದಾಗ್ಯೂ ಸಕಲ ಆಶೀರ್ವಾದಕ್ಕೂ ಆತನೇ ಮೂಲವಾಗಿದ್ದಾನೆ (ಯಾಕೋಬ 1:17).

ದೇವರು *ನ್ಯಾಯಾಧಿಪತಿಯೆಂದು* ತಿಳಿದು ಬರುತ್ತೇವೆ: ನಮ್ಮ ಅಂತ್ಯವು ಆತನ ಕೈಯಲಿದೆ "ನಮಗೆ ತಪ್ಪುಮಾಡಿದವರನ್ನು ನಾವು ಕ್ಷಮಿಸುವಂತಹ ನಮ್ಮ ತಪ್ಪುಗಳನ್ನು ಕ್ಷಮಿಸು" ಕ್ರೈಸ್ತರ ಆನಂದವನ್ನು ನಾಶಮಾಡುವ ಎರಡು ಸಂಗತಿಗಳಿವೆ.[8] "ಅರಿಕೆ ಮಾಡದ ಹಾಗೂ ಕ್ಷಮಿಸದೆ ಇರುವ ತಪ್ಪುಗಳು," ಇತರರಿಗೆ ವಿರುದ್ಧವಾಗಿರುವ ದ್ವೇಷ ಹಾಗೂ ಅಸೂಯೆ,[9] ಮಾದರಿ ಪ್ರಾರ್ಥನೆಯು ಈ ಎರಡು ಅಂಶಗಳನ್ನು ಪರಿಶೀಲಿಸುತ್ತದೆ.

*ಕಾಯುವ* ದೇವರ ಬಳಿಗೆ ಬಂದಿದ್ದೇವೆ: ನಮ್ಮನು ಶೋಧನೆಯೊಳಗೆ ಸೇರಿಸಬೇಡ "ಯಾಕೆಂದರೆ ದೇವರು ನಮ್ಮನು ಶೋಧನೆಗೆ ಒಳಪಡಿಸುವದಿಲ್ಲ" (ಯಾಕೋಬ 1:13), ಈ ಮಾನವಿಯ ಅರ್ಥವೇನೆಂದರೆ, "ನಮ್ಮನ್ನು ಜಯಿಸಬಹುದಾದ ಶೋಧನೆಯಿಂದ ತಪ್ಪಿಸು" ಎಂಬುದೆ (ಯಾಕೋಬ 1:14, 15; 1 ಕೊರಿಂಥ 10:13). ಮೆಕ್ ಫಾಟ್ರಿಜ್‌ರವರ ಪ್ರಕಾರ, "ಹಾವಿನ ಕಡಿತಕ್ಕೆ, ಕ್ಷಮೆಯೇ ಪರಿಹಾರ"; "ಪ್ರಾರ್ಥನೆಯು ನಮ್ಮನ್ನು ಹಾವು ಕಡಿಯುವ ಸ್ಥಳದಿಂದ ದೂರವಿಡುತ್ತದೆ."[10]

ಮಾದರಿ ಪ್ರಾರ್ಥನೆಯು ಜೀವಿತದ ಸಕಲ ಕ್ಷೇತ್ರವನ್ನು ಆವರಿಸುತ್ತದೆ. ಅದು ವರ್ತಮಾನದ ಕೊರತೆಗಳನ್ನು ನೀಗಿಸುತ್ತದೆ: ಅನುದಿನದ ಆಹಾರವನ್ನು ಅನುಗ್ರಹಿಸು. "ನಮ್ಮ ತಪ್ಪುಗಳನ್ನು ಕ್ಷಮಿಸು" ಎನ್ನುವದು, ನಮ್ಮ ಕಳೆದು ಹೋದ ಪಾಪಗಳನ್ನು ಮನ್ನಿಸುತ್ತದೆ. "ನಮ್ಮನ್ನು ಶೋಧನೆಗೆ ಸೇರಿಸಬೇಡ" ಎನ್ನುವದು, *ಮುಂದಿನ* ವಿಚಾರಣೆಯಿಂದ ತಪ್ಪಿಸುತ್ತದೆ.[11]

ಮಾದರಿಯ ಪ್ರಾರ್ಥನೆಯ ಬಗ್ಗೆ ಅಧಿಕವಾಗಿ ಮಾತನಾಡಬಹುದು, ಇಲ್ಲಿ ಇನ್ನೊಂದು ಸಾರಾಂಶವನ್ನು ನೀಡಲಾಗಿದೆ: ನಮಗೆಲ್ಲರಿಗೂ ಪ್ರಾರ್ಥನೆಯ ಅಗತ್ಯವಿದೆ. ಆಲ್‌ಫ್ರೆಂಡ್ ಟೆನಿಸನ್‌ರವರು ಬರೆದು, "ಈ ಪ್ರಪಂಚದ ಕನಸುಗಳಿಗಿಂತ, ಹೆಚ್ಚಾದ ಸಂಗತಿಗಳನ್ನು ಪ್ರಾರ್ಥನೆಯ ಮೂಲಕ ಪಡೆಯಬಹುದು."[12] ಫ್ರೆಂಡಿಂಗ್ ಹಾರ್ಟ್ಸ್ ಟ್ರೂ ಹೋಮ್ ಎಂಬ ಪ್ರಾರ್ಥನೆಯ ಪುಸ್ತಕವನ್ನು *ರಿಚರ್ಡ್ ಫೋಸ್ಟರ್‌ರವರು* ಬರೆದಿದ್ದಾರೆ.[13] ದೇವರು ಯೆರೆಮೀಯನಿಗೆ, "ನನ್ನನ್ನು ಕೇಳಿಕೋ, ನಾನು ನಿನಗೆ ಸದುತ್ತರವನ್ನು ದಯಪಾಲಿಸು ವೆನು" (ಯೆರೆಮೀಯ 33:3ಎ). "ನೀವು ನಂಬಿಕೊಂಡು ಪ್ರಾರ್ಥನೆಯಲ್ಲಿ ಏನೇನು ಬೇಡಿಕೊಳ್ಳುವಿರೋ ಅವನ್ನೆಲ್ಲಾ ಹೊಂದುವಿರಿ" (ಮತ್ತಾಯ 21:22) ಎಂದು ಯೇಸು

ಹೇಳಿರುವನು.

ಯೇಸುವಿನ ಮೊದಲ ಪ್ರಾರ್ಥನೆಯನ್ನು: "ಪ್ರಾರ್ಥನಾ ಪರರಾಗಿರ್ರಿ" ಎಂದು ಹೆಸರಿಸಬಹುದು. ಇದು ಒಂದು ವಿಚಿತ್ರವಾದ ಸಲಹೆ ಇರಬಹುದು. ಅನೇಕ ಯೋಜನೆಗಳಿಗೆ, ವಿಶೇಷವಾದ ತಂತ್ರಜ್ಞಾನದ ಅಗತ್ಯವಿದೆ. ಪ್ರಾರ್ಥನೆಯನ್ನು ಮಾಡುವ ಕ್ರಮವನ್ನು ಕಲಿಯ ಬೇಕಾದರೆ, ಪ್ರಾರ್ಥನೆ ಮಾಡಲು ಆರಂಭಿಸು.[14] *ಪ್ರತಿ* ಅಗತ್ಯತೆಗಾಗಿ ದೇವರ ಬಳಿಗೆ ಸಾಗು.

ಶೋದನೆ ಉಂಟಾಗುವಾಗ?
ಅಗಚಾಟ್ಲು ಬಂದರೂ?
ಯೇಸುನಾದ ನಿತ್ಯಾಶ್ರಯ,
ಜಪ ಮಾಡುತ್ತಾ ಇರು.[15]

## ಮುನ್ನುಗ್ಗುತ್ತಿರು (ವಚನಗಳು 5-8)

ಪ್ರಾರ್ಥನೆಯ ವಿಚಾರವನ್ನು ಯೇಸು ಒಂದು ಸಾಮಾನ್ಯದ ರೂಪದಲ್ಲಿ ತನ್ನ ಶಿಷ್ಯರಿಗೆ ತಿಳಿದನು:

> ನಿಮ್ಮಲ್ಲಿ ಒಬ್ಬನಿಗೆ ಸ್ನೇಹಿತನಿದ್ದಾನೆ ಎಂದು ಹೇಳೋಣ. ಅವನು ಸರುಹೊತ್ತಿನಲ್ಲಿ ಆ ಸ್ನೇಹಿತನ ಬಳಿಗೆ ಹೋಗಿ - ಸ್ನೇಹಿತನೇ, ನನಗೆ ಮೂರು ರೊಟ್ಟಿಗಳನ್ನು ಕಡವಾಗಿ ಕೊಡು. ನನ್ನ ಸ್ನೇಹಿತರಲ್ಲಿ ಒಬ್ಬನು ಎಲ್ಲಿಗೋ ಪ್ರಯಾಣವಾಗಿ ನನ್ನ ಬಳಿಗೆ ಬಂದಿದ್ದಾನೆ; ಅವನಿಗೆ ಊಟಮಾಡಿಸುವದಕ್ಕೆ ನನ್ನಲ್ಲಿ ಏನೂ ಇಲ್ಲ ಎಂದು ಕೇಳಲು ಆ ಸ್ನೇಹಿತನು - ನನಗೆ ತೊಂದರೆಕೊಡಬೇಡ; ಈಗ ಕದಾಹಾಕಿ ಅದೆ; ನನ್ನ ಚಿಕ್ಕ ಮಕ್ಕಳು ನನ್ನ ಕೂಡ ಮಲಗಿದ್ದಾರೆ; ನಾನು ಎದ್ದು ನಿನಗೆ ಕೊಡುವದಕ್ಕಾಗುವದಿಲ್ಲ ಎಂದು ಒಳಗಿನಿಂದ ಉತ್ತರಕೊಟ್ಟರೂ ಕೊ;ಬಹುದು. ಆದರೆ ಸ್ನೇಹದ ನಿಮಿತ್ತವಾಗಿ ಎದ್ದುಕೊಡದೆ ಇದ್ದರೂ ಅವನ ಕಾಟದ ದೆಸೆಯಿಂದ ಎದ್ದು ಬಂದು ಕೇಳಿದಷ್ಟು ಅವನಿಗೆ ಕೊಡುವನೆಂದು ನಿಮಗೆ ಹೇಳುತ್ತೇನೆ (ವಚನಗಳು 5-8).

ಆ ದಿನಗಳಲ್ಲಿ, ಅತಿಥಿ ಸತ್ಕಾರ್ಯವು ಕೇವಲ ಒಂದು ಸಾಮಾಜಿಕ ಕಾರ್ಯವಾಗಿ ಅದು ಒಂದು ನೈತಿಕವಾದ ಹಾಗೂ ಅಗತ್ಯವಾದ ಸಂಗತಿಯಾಗಿತ್ತು. ಆ ದಿನಗಳಲ್ಲಿ ವಿಶ್ರಾಂತಿ ಗ್ರಹಗಳು ವಿರಳವಾಗಿದ್ದವು.[16] ಸ್ನೇಹಿತ ಅಥವಾ ಪರಿಚಯದ ವ್ಯಕ್ತಿಯು ಒಂದು ಊರಿಗೆ ಬಂದು ಅವನಿಗೆ ವಿಶ್ರಾಂತಿ ಗ್ರಹವು ದೊರಕದೆ ಹೋದರೆ, ಅಲ್ಲಿರುವ ಅವನ ಸ್ನೇಹಿತನೇ ಅವನಿಗೆ ಊಟ ಹಾಗೂ ವಸತಿಯನ್ನು ನೀಡಬೇಕಿತ್ತು. ಇಲ್ಲಿ ತಿಳಿಸಿರುವ ಸಾಮ್ಯದಲ್ಲಿ, ಆ ಸ್ನೇಹಿತನು ಮಧ್ಯರಾತ್ರಿಯ ಸಮಯದಲ್ಲಿ ಬಂದನು. ಅದು ತಡವಾಗಿ ಬಂದ ಕಾರಣ ನಮಗೆ ತಿಳಿದಿರುವದಿಲ್ಲ. ಒಂದು ವೇಳೆ ಸಮಯವನ್ನು ತಪ್ಪಾರ್ಥ ಮಾಡಿಕೊಂಡಿರಬಹುದು. ಒಂದು ವೇಳೆ ಪ್ರಯಾಣದಲ್ಲಿ ಅಡಚಣೆಯಾಗಿರಬಹುದು. ಹಗಲಿನ ಬಿಸಿಲಿನ ತಾಪವನ್ನು ತಡೆಗಟ್ಟುವ ಸಲುವಾಗಿ ರಾತ್ರಿ ಪ್ರಯಾಣ ಮಾಡಿರಬಹುದು.[17] ಕಾರಣವೇನೇ ಇರಲಿ, ಅವನು ರಾತ್ರಿಯಲ್ಲಿ ಬಂದನು. ವಸತಿ ಲಭ್ಯವಿದ್ದರೂ, ಊಟ ಲಭ್ಯವಿರಲಿಲ್ಲ, ಬೀರುವಿನಲ್ಲಿ ಏನೂ ಇರಲಿಲ್ಲ.[18]

ಅದು ಬೇಸರಗೊಳ್ಳುವ ಕ್ಷಣವಾಗಿತ್ತು. ರಾತ್ರಿಯಲ್ಲಿ ಊಟ ದೊರೆಯುವ ಅಂಗಡಿಗಳು ಇರಲಿಲ್ಲ.[19] ಈಗ ಆಮನೆಯ ಯಜಮಾನನು ಏನು ಮಾಡಬೇಕಿತ್ತು? ಆದ್ದರಂದ ಅವನು, ಈ ಪಟ್ಟಣದಲ್ಲಿ ನನ್ನ ಸ್ನೇಹಿತನೊಬ್ಬನಿದ್ದಾನೆ. ಅವನಿಂದ ಆಹಾರವನ್ನು ನಾನು ಪಡೆಯಬಹುದು ಎಂದು ತಿಳಿದು ತನ್ನ ಸ್ನೇಹಿತನ ಮನೆಗೆ ತೆರಳಿದನು. ಆಗ ಅವನ ಮನೆಯ ಬಾಗಿಲುಗಳು ಹಾಗೂ ಅಗುಳಿಗಳು ಮುಚ್ಚಲ್ಪಟ್ಟಿದ್ದವು.[20] ಅವನು ಮನೆಯ ಬಾಗಿಲನ್ನು ತಟ್ಟಿದನು.[21]

ಆಗ ಮನೆಯ ಒಳಗಿನಿಂದ, "ಯಾರು? ಏನು ಬೇಕು?" ಎಂಬ ಸ್ವರವು ಕೇಳಿಸಿತು. ಮನೆಯ ಹೊರಗಿದ್ದ ವ್ಯಕ್ತಿಯು, "ಸ್ನೇಹಿತನೇ, ನನಗೆ ಮೂರು ರೊಟ್ಟಿಗಳನ್ನು ಕಡವಾಗಿ

ಕೊಡು, ನನ್ನ ಸ್ನೇಹಿತರಲ್ಲಿ ಒಬ್ಬನು ಎಲ್ಲಿಗೂ ಪ್ರಯಾಣವಾಗಿ ನನ್ನ ಬಳಿಗೆ ಬಂದಿದ್ದಾನೆ ಅವನಿಗೆ ಊಟ ಮಾಡಿಸುವದಕ್ಕೆ ನನ್ನಲ್ಲಿ ಏನು ಇಲ್ಲ" ಅಂದನು (ವಚನಗಳು 5ಬಿ, 6). ಅವನು ಮೂರು ರೊಟ್ಟಿಗಳನ್ನು ಕೇಳಿದನು, "ಒಂದು ತನಗಾಗಿ, ಮತ್ತೊಂದು ಸ್ನೇಹಿತನಿಗಾಗಿ, ಉಳಿದ ಇನ್ನೊಂದು ರೊಟ್ಟಿಯನ್ನು ತುರ್ತಿಗಾಗಿ ಪಡೆದಿದ್ದನು."[22]

ಒಳಗಿನಿಂದ ಒಂದು ಕೋಪದ ಪ್ರತಿಕ್ರಿಯೆ ಉಂಟಾಯಿತು: ನನಗೆ ತೊಂದರೆಕೊಡಬೇಡ; ಈಗ ಕದ ಹಾಕಿ ಅದೆ, ನನ್ನ ಚಿಕ್ಕ ಮಕ್ಕಳು ನನ್ನ ಕೂಡ ಮಲಗಿದ್ದಾರೆ; ನಾನು ಎದ್ದು ನಿನಗೆ ಕೊಡುವದಕ್ಕಾಗುವದಿಲ್ಲ (ವಚನ 7). ಅನೇಕ ಮನೆಗಳು ಒಂದೇ ಕೊಠಡಿಯನ್ನು ಹೊಂದಿರುತ್ತವೆ. ರಾತ್ರಿ ವೇಳೆಯಲ್ಲಿ ಮಲಗಲು ಅಲ್ಲಿ ಹಾಸಿಗೆಗಳನ್ನು ನೆಲದ ಮೇಲೆ ಹಾಕಿರುತ್ತಾರೆ. ದಂಪತಿಗಳಿಗೆ, ಮಕ್ಕಳಿದ್ದರೆ, ಆ ಕೊಠಡಿಯು ಎಲ್ಲಲಿಂದ ತುಂಬಿರುತ್ತದೆ.[23] ಇಂಥಹ ಪರಿಸ್ಥಿತಿಯಲ್ಲಿ, ಆ ಕತ್ತಲಿನಲ್ಲಿ ಏಳುವದನ್ನು ಊಹಿಸಿಕೊಳ್ಳಿರಿ (ರಾತ್ರಿ ದೀಪಗಳಿರಲಿಲ್ಲ[24]) ನಿದ್ದೆಯಿಂದ ಎದ್ದು, ಮಲಗಿರುವವರನ್ನು ದಾಟಿ ಮೂರು ರೊಟ್ಟಿಗಳನ್ನು ಹುಡುಕಾಡಿ, ಸ್ನೇಹಿತನಿಗೆ ನೀಡುವದು ಪ್ರಯಾಸಕರವಲ್ಲವೇ, ಆದ್ದರಿಂದ ಅವನು "ಕೊಡುವದಕ್ಕಾಗುವದಿಲ್ಲ" ಅಂದನು!

ಹೇಗೂ ಆ ಮನುಷ್ಯನು ರೊಟ್ಟಿಯನ್ನು ನೀಡಲಾರೆ ಎಂಬ ಉತ್ತರವನ್ನು ನೀಡಲಿಲ್ಲ, ಆದರೆ "ಅವನ ಕಾಟದ *ದೆಸೆಯಿಂದ* ಎದ್ದು ಬಂದು ಅವನು ಕೇಳಿದಷ್ಟು ಕೊಡುವನಲ್ಲವೇ" ಎಂದು ಯೇಸು ಹೇಳಿದನು (ವಚನ 8; ಒತ್ತಿ ಹೇಳಿದ್ದು ನನ್ನದು). ಅಲ್ಲಿ ಉಂಟಾದ ಬದಲಾವಣೆಯನ್ನು ಊಹೆ ಮಾಡಬಹುದಾಗಿದೆ:

(ಸ್ನೇಹಿತನು ತಟ್ಟುತ್ತಲೇ ಇದ್ದನು.)

"ನನ್ನ ಮಕ್ಕಳನ್ನು ಮಲಗಿಸಲು ಒಂದು ತಾಸು ಸಮಯ ಹಿಡಿದದೆ, ಅವರು ಎದ್ದು ಬಿಟ್ಟರೆ, ರಾತ್ರಿ ನಿದ್ದೆಯನ್ನು ನಾನು ಕಳಕೊಳ್ಳುತ್ತಾನೆ, ಆದ್ದರಿಂದ ಹೊರಟುಹೋಗು!"

"ಇಲ್ಲ, ನನಗೆ ರೊಟ್ಟಿಗಳ ಅಗತ್ಯವಿದೆ!"

"ಇಲ್ಲ!"

(ಪುನಃ ಬಾಗಿಲು ತಟ್ಟುತ್ತಾನೆ.)

"ದಯವಿಟ್ಟು ನಿಲ್ಲಿಸು! ನೀನು ತಟ್ಟುತ್ತಲೇ ಇದ್ದರೆ, ನನ್ನ ಹೆಂಡತಿಯು ಎಚ್ಚರವಾದರೆ, ನಾವಿಬ್ಬರೂ ತೊಂದರೆಗೊಳಗಾಗುತ್ತೇವೆ. ನನ್ನ ಹೆಂಡತಿ ಆನಂದವನ್ನು ಕಳಕೊಂಡರೆ, *ಬೇರೆ ಯಾರಿಗೂ* ಆನಂದವಿರುವದಿಲ್ಲ!"[25]

"ಆದರೆ, *ನನಗೆ* ರೊಟ್ಟಿಗಳು ಬೇಕೆ ಬೇಕು!"

"ಇಲ್ಲ!"

(ಬಾಗಿಲು ತಟ್ಟುತ್ತಲೇ ಇರುವನು.)

"ಸರಿ! ಈಗ ನೀನು ಎಲ್ಲರನ್ನು ಎಬ್ಬಿಸಿದ್ದೀ! ತಟ್ಟುವ ಶಬ್ದವನ್ನು ನಿಲ್ಲಿಸು, ನಾನು ಏನನ್ನಾದರೂ ಮಾಡಲು ಪ್ರಯತ್ನಿಸುತ್ತೇನೆ!"

"ಎದೆಬಿಡದೆ" ಅಂದರೆ ಗ್ರೀಕ್ ಭಾಷೆಯಲ್ಲಿ "ಅಕ್ಷರಶ" ಅವಮಾನ" ಎಂದು NASBಯಲ್ಲಿ ಅರ್ಥ. KJVಯಲ್ಲಿ ಸ್ನೇಹಿತನು ತನ್ನ ಅತಿಥಿಯನ್ನು ಸತ್ಕರಿಸದೆ ಹೋದರೆ, ಅದು ಅವನಿಗೆ ಅವಮಾನವಾಗಿದೆ. ಹೌದು ಅವನು ನಾಚಿಕೆ ಪಡದೆ, ಒತ್ತಾಯಿಸಿದನು. ಅವನು ತಟ್ಟಿದ ಬಾಗಿಲಿನ ಶಬ್ದಕ್ಕೆ ನೆರೆಯವರೆಲ್ಲರೂ ಎಚ್ಚರವಾಗಿರಬಹುದು, ದೀಪಗಳನ್ನು ಹಚ್ಚಲಾಯಿತು. ನಾಯಿಗಳು ಬೊಗಳಿದವು. ಅವನ ಮುಖ ಕೆಂಪಾಗಿರಬಹುದು. ಕೋಪದ ಸ್ವರಗಳು ಅವನನ್ನು ಮೌನವಾಗಿರಲು ಹೇಳಿರಬಹುದು. ಹೇಗೂ ತನಗೆ ರೊಟ್ಟಿಗಳು ದೊರೆಯುವವರೆಗೆ, ಅವನು ತನ್ನ ಸ್ನೇಹಿತನನ್ನು ಒತ್ತಾಯಿಸಿದನು.

ಇಲ್ಲಿ ದೇವರು ಕಠಿಣವಾದ ವ್ಯಕ್ತಿ, ಆತನನ್ನು ಒತ್ತಾಯಪಡಿಸಬೇಕು ಎಂಬ ತಾತ್ಪರ್ಯವನ್ನು ನಾನು ಹೇಳುತ್ತಿದ್ದೇನೆಯೇ? ಖಂಡಿತವಾಗಿಯೂ ಇಲ್ಲ.

ಯೇಸು ಪ್ರಾರ್ಥನೆಯ ಕುರಿತಾಗಿ ಅಂತಿಮವಾದ ಸಂದೇಶವನ್ನು ವಚನ 13ರಲ್ಲಿ ಗಮನಿಸೋಣ; "ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೆ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ *ಎಷ್ಟೋ ಹೆಚ್ಚಾಗಿ* ಪವಿತ್ರಾತ್ಮವರವನ್ನು ಕೊಡುವನಲ್ಲವೇ?" (ಒತ್ತಿ ಹೇಳಿದ್ದು ನನ್ನದು.) ಈ ಸಾಮ್ಯದ ಸಂದೇಶವು ಈ ರೀತಿ ಇರಬಹುದು: ಒತ್ತಾಯ ಮಾಡುವದರಿಂದ, ಒಬ್ಬ ಕಠಿಣನಾದ ಸ್ನೇಹಿತನು ಪರಿವರ್ತನೆಗೊಳ್ಳುವದಾದರೆ, ನಿನ್ನನ್ನು ಆಶೀರ್ವದಿಸುವದಕ್ಕೆ ಸಿದ್ಧನಾಗಿರುವ ಪರಲೋಕ ತಂದೆಯನ್ನು ಒತ್ತಾಯಿಸುವಾಗ, ಆತನು *ಎಷ್ಟೋ ಹೆಚ್ಚಾಗಿ* ನಮ್ಮ ಪ್ರಾರ್ಥನೆಗೆ ಉತ್ತರ ನೀಡಬಲ್ಲನಲ್ಲವೇ! "ಆತನು ತನ್ನ ಶಿಷ್ಯರಿಗೆ ಮತ್ತೊಂದು ಸಾಮ್ಯದ ಅರ್ಥವನ್ನು ನೀಡಿ," "ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥನೆ ಮಾಡುತ್ತಿರಬೇಕೆಂದನು" (ಲೂಕ 18:1). "ದೇವರ ಕಠಿಣತೆಯನ್ನು ಅಳೆಯುವ ದೃಷ್ಟಿಯಿಂದ ಈ ಸಾಮ್ಯವನ್ನು ಹೇಳದೆ, ಅವನ ಚಿತ್ತವನ್ನು ದೃಢವಾಗಿ ಹಿಡಿದುಕೊಳ್ಳುವ ಉದ್ದೇಶದಿಂದ ಹೇಳಲಾಗಿದೆ" ಎಂದು ಕ್ರಿಸ್ ಬುಲ್ಲಾರ್ಡ್ ತಿಳಿಸಿರುವರು.[26]

ನಮ್ಮ ಮನವಿಯು ಗಂಭೀರವಾದದ್ದು ಎಂದು ದೇವರು ತಿಳಿಯಬಯಸುತ್ತಾನೆ ಮನ ಪೂರ್ವಕವಲ್ಲದ ಪ್ರಾರ್ಥನೆಗಳನ್ನು ಆತನು ಆಲಿಸುವದಿಲ್ಲ. ತುಟಿಗಳ ಮೇಲೆ ಅನೇಕ ಪ್ರಾರ್ಥನೆಗಳು ಬಂದರೂ, ಅವುಗಳು ಬೇಗನೆ ಅದೃಷ್ಟವಾಗುತ್ತವೆ.[27] ಪ್ರಭಾವಿತ ಪ್ರಾರ್ಥನೆಯು ಮಾಡಲು ನಮ್ಮ ಮೇಲೆ ಪರಿಣಾಮ ಬೀರಬೇಕು. ಅದನ್ನು ಮನಃ ಪೂರ್ವಕವಾಗಿ ಮಾಡಬೇಕು.

## ತಾಳ್ಮೆವುಳ್ಳವರಾಗಿರ್ರಿ (ಲೂಕ 11:9, 10)

ಒತ್ತಾಯದ ಮಾತುಗಳನ್ನು ಯೇಸು ಮುಂದುವರೆಸಿದನು: "ಹಾಗೆಯೇ ನಾನು ನಿಮಗೆ ಹೇಳುವದೇನಂದರೆ - ಬೇಡಿಕೊಳ್ಳಿರಿ, ನಿಮಗೆ ದೊರೆಯುವದು; ಹುಡುಕಿರಿ, ನಿಮಗೆ ಸಿಕ್ಕುವದು; ತಟ್ಟಿರಿ, ನಿಮಗೆ ತೆರೆಯುವದು. ಯಾಕಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು, ಹುಡುಕುವವನಿಗೆ ಸಿಕ್ಕುವದು, ತಟ್ಟುವವನಿಗೆ ತೆರೆಯುವದು" (ವಚನಗಳು 9, 10). ಈ ಸಾಮ್ಯವು ಸ್ವಾಭಾವಿಕ ಸ್ವಭಾವವನ್ನು ಹೊಂದಿದೆ: ಅವಮಾನಿತವಾದ ಸ್ನೇಹಿ ತನು, ತನ್ನ ಸ್ನೇಹಿತನಿಗಾಗಿ, ಇನ್ನೊಬ್ಬ ಸ್ನೇಹಿತನಿಂದ ರೊಟ್ಟಿಗಳನ್ನು ಪಡೆಯಲು, ಅವರ ಮನೆಯ ಕದಗಳನ್ನು ಬಡಿದನು.

ನಮಗೆ ಬೇಕಾದದ್ದನ್ನು ಪಡೆಯಲು, ದೇವರಿಗೆ ಪ್ರಾರ್ಥನೆ ಮಾಡಬೇಕು, ಎಂಬ ತಾತ್ಪರ್ಯವನ್ನು ಇಲ್ಲಿ ಗಮನಿಸುತ್ತೇವೆ. ಮೇಲಿನ ವಚನದಲ್ಲಿ ಕೇಳಿರಿ, ಹುಡುಕಿರಿ, ತಟ್ಟಿರಿ ಎಂಬ ಪದಗಳು ಪ್ರಮುಖವಾಗಿವೆ.[28] ಇದರ ಕುರಿತ ಯಾಕೋಬನು, "ನೀವು ದೇವರನ್ನು ಬೇಡಿಕೊಳ್ಳದ ಕಾರಣ ನಿಮಗೇನು ದೊರೆಯಲಿಲ್ಲ" (ಯಾಕೋಬ 4:2ಸಿ) ಎಂದಿರುವರು.

ನಾವು ಬೇಸರಗೊಳ್ಳದೆ ಬೇಡುತ್ತಲೇ ಇರಬೇಕು ಎಂದು ಈ ವಚನದಲ್ಲಿ ಒತ್ತಿ ಹೇಳ ಲಾಗಿದೆ. ಮೂಲ ಬರವಣಿಗೆಯಲ್ಲಿ, "ಕೇಳಿರಿ, ಹುಡುಕಿರಿ, ಮತ್ತು ತಟ್ಟಿರಿ ಎಂಬ ಪದಗಳು ವರ್ತಮಾನಕಾಲದಲ್ಲಿದೆ, ಅದನ್ನು ಮುಂದುವರೆಸಬೇಕು ಎಂಬ ಅರ್ಥವಾಗಿದೆ." ವಚನ 9ರ ಅರ್ಥ "ಕೇಳುತ್ತಲೇ ಇರು" ಅದು ನಿನಗೆ ದೊರೆಯುತ್ತದೆ; ಹುಡುಕುತ್ತಲೇ ಇರು, ನೀನು ಕಂಡುಕೊಳ್ಳುವಿ; ತಟ್ಟುತ್ತಲೇ ಇರು, ಅದು ನಿನಗೆ ತೆರೆಯುತ್ತದೆ, ಸೋದೋಮ ಹಾಗೂ ಗೋಮೋರ ಪಟ್ಟಣಗಳಿಗಾಗಿ ಬೇಡುತ್ತಲೇ ಇದ್ದ ಅಬ್ರಹಾಮನನ್ನು ನೆನಪು ಮಾಡಿರಿ (ಆದಿಕಾಂಡ 18:22-32). ತನ್ನ ದೇಹದಲ್ಲಿದ ಶೂಲಕ್ಕಾಗಿ ಎಡೆಬಿಡದೆ ಪ್ರಾರ್ಥನೆ ಮಾಡಿದ ಪೌಲನನ್ನು ನೆನಪುಮಾಡಿರಿ (2 ಕೊರಿಂಥ 12:8). ರಕ್ತದ ಬೆವರು ಬರುವವರೆಗೆ ಗೆತ್ಸೇಮನೆ ತೋಟದಲ್ಲಿ ಪ್ರಾರ್ಥಿಸಿದ ಕ್ರಿಸ್ತನನ್ನು ನೆನಪು ಮಾಡಿರಿ (ಲೂಕ 22:44). ತಮ್ಮ ಪ್ರಾರ್ಥನೆಗೆ ಉತ್ತರ ಬರುವವರೆಗೆ ಈ ಮೂವರು ಪ್ರಾರ್ಥಿಸುತ್ತಲೇ ಇದ್ದರು.[29]

ಈ ವಚನದಲ್ಲಿ ಪ್ರಾರ್ಥಿಸುತ್ತಲೇ ಇರಬೇಕು ಎಂಬುದಾಗಿ ಮಾತ್ರ ಇರದೆ, ಅದು ಅತಿಕಾತುರದಿಂದ ಇರಬೇಕು. ಕೇಳುವದಕ್ಕಿಂತಲೂ, ಹುಡುಕುವದು ಹುಡುಕವದಕ್ಕಿಂತಲೂ, ತಟ್ಟುವದು ಅತಿ ಪ್ರಯಾಸಕರವಾಗಿದೆ. ನಾವು ಎಡಬಿಡದೆ ಪ್ರಾರ್ಥಿಸಬೇಕು. ಯಾಕೋಬ 5:16 ನೀತಿವಂತನ ಅತ್ಯಾಸಕ್ತಿಯುಳ್ಳ ಪ್ರಾರ್ಥನೆಯು ಬಹು ಬಲವಾಗಿದೆ (ಒತ್ತಿ ಹೇಳಿದ್ದು ನನ್ನದು).[30]

ನಾವು ಏಕೆ ಪ್ರಾರ್ಥಿಸಬೇಕು? ಪ್ರಾರ್ಥನೆಯನ್ನು ಎಡಬಿಡದೆ ಏಕೆ ಮಾಡಬೇಕು? ಯಾಕಂದರೆ, ನಮ್ಮ ವಾಕ್ಯದ ಪ್ರಕಾರ, ದೇವರು ಇಂಥಹ ಪ್ರಾರ್ಥನೆಗೆ ಉತ್ತರನೀಡುತ್ತಾನೆ. ಪ್ರತಿಕ್ರಿಯೆಗೂ ಒಂದು ಪ್ರತಿಕ್ರಿಯೆ ಇರುತ್ತದೆ: ಕೇಳಿದವನು ಪಡಕೊಂಡನು, ಹುಡುಕಿದವನು, ಕಂಡುಕೊಂಡುವನು, ಮತ್ತು ತಟ್ಟಿದವನಿಗೆ ಬಾಗಿಲು ತೆರೆಯಿತು. ತನ್ನ ಸ್ನೇಹಿತನಲ್ಲಿ ಒತ್ತಾಯ ಮಾಡಿದವನ ಸಾಮ್ಯದಲ್ಲಿ:ವನು ಕೇಳಿ, ಹುಡಿಕಿ ಮತ್ತು ತಟ್ಟಿದ್ದರಿಂದ, ಅಗತ್ಯವಿದ್ದ ಮೂರು ರೊಟ್ಟಿಗಳನ್ನು ಪಡೆದನು.

ಅಂದರೆ ದೇವರು ತನ್ನ ಮಕ್ಕಳು ಮಾಡುವ ಪ್ರತಿ ಪ್ರಾರ್ಥನೆಗೆ "ಹೌದು" ಎಂದು ಹೇಳುವನೇ? ಇಲ್ಲಿ ಯೇಸು ಸಹ ಬಾಧೆಯೆಂಬ ಈ ಪಾತ್ರೆಯನ್ನು ತೊಲಗಿಸು ಎಂದು ಬೇಡಿದನು (ಮತ್ತಾಯ 26:39). ಹೌದು, ಪೌಲನು ಸಹ ಅವನ ದೇಹದಲ್ಲಿದ್ದ ಶೂಲವನ್ನು ತೆಗೆಯಬೇಕೆಂದು ಪ್ರಾರ್ಥಿಸಿದನು (2 ಕೊರಿಂಥ 12:7, 8). ಆದರೆ ಆದ್ದರಿಂದ ಅವುಗಳನ್ನು ತೆಗೆಯಲಿಲ್ಲ. ನಮ್ಮ ಜ್ಞಾನದ ಮುಂದಿನ ಭಾಗವು ದೇವರನ್ನು ನಮ್ಮ ದೈಹಿಕ ತಂದೆಗಳಿಗೆ ಹೋಲಿಸಲಾಗಿದೆ. ತಂದೆಗಳಾದ ನಾವುಗಳು ನಮ್ಮ ಮಕ್ಕಳು ನಮ್ಮಲ್ಲಿ ಮನವಿಗಳಿಗೆ "ಹೌದು" ಎಂದು ಹೇಳುವೆವು.[31] ಕೆಲವು ಸಾರಿ "ಇಲ್ಲ," ಅಥವಾ "ಸ್ವಲ್ಪ ತಾಳು" ಎಂದು ಹೇಳುತ್ತೇವಲ್ಲವೇ.[32] ನಾವು ಇಲ್ಲಿ ಅಂದರು ಸಹ ಉತ್ತಮವಾದದ್ದನ್ನೆ ಬಯಸುತ್ತೇವೆ. ನಾವು ನಮ್ಮ ಮಕ್ಕಳನ್ನು ಪ್ರೀತಿಸುವದರಿಂದ ಅವರ ಮನವಿಗೆ ಪ್ರತಿಕ್ರಯಿಸುತ್ತೇವೆ ವಚನ 8-10ರಲ್ಲಿ ಇದೇ ಅಂಶವನ್ನು ಕಾಣುತ್ತೇವೆ. ತಾಳೆಯಿಂದ ಬೇಡುವವರ ಪ್ರಾರ್ಥನೆಯನ್ನು ದೇವರು ಮನ್ನಿಸುತ್ತಾನೆ.

## ಸಕಾರಾತ್ಮಕವಾಗಿರ್ರಿ (ಲೂಕ 11:11-13)

ನಾವು ಪ್ರಾರ್ಥನೆಯ ಕುರಿತು ಸಕಾರಾತ್ಮಕವಾಗಿರಬೇಕು. ಯೇಸು ಹೇಳು ಅಂತಿಮ ನುಡಿಗಳಲ್ಲಿ ಅವುಗಳನ್ನು ಅಳವಡಿಸಲಾಗಿದೆ:

> ನಿಮ್ಮಲ್ಲಿ ತಂದೆಯಾದವನು ಮೀನನ್ನು ಕೇಳುವ ಮಗನಿಗೆ ಮೀನು ಕೊಡುವೆ ಹಾವನ್ನು ಕೊಡುವೆನೇ ಅಥವಾ ತತ್ತಿಯನ್ನು ಕೇಳಿದರೆ ಚೇಳನ್ನು ಕೊಡುವನೇ? ಹಾಗಾದರೆ ಕೆಟ್ಟವರಾದ[33] ನೀವು ನಿಮ್ಮ ಮಕ್ಕಳಿಗೆ ಒಳ್ಳೇ ಪದಾರ್ಥಗಳನ್ನು ಕೊಡಬಲ್ಲವರಾದದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವನಿಗೆ ಎಷ್ಟೋ ಹೆಚ್ಚಾಗಿ ಪವಿತ್ರಾತ್ಮವರವನ್ನು ಕೊಡುವನಲ್ಲವೇ ಅಂದನು? (ವಚನಗಳು 11-13).

*ಚಿತ್ರಣ ಒಂದು.* ಒಬ್ಬ ಹುಡುಗನು ತಂದೆಯ ಬಳಿಗೆ ಬಂದು ಮೀನನ್ನು ಕೇಳುತ್ತಾನೆ. "ಒಂದು ವೇಳೆ ಆ ಮೀನನ್ನು ತಿಂಡಿಗಾಗಿ ಸಿದ್ಧಪಡಿಸಿರಬಹುದು.[34] ಅದಕ್ಕೆ ತಂದೆಯು ನಗುತ್ತ ಸರಿ ನೀಡುತ್ತೇನೆ" ಎಂದಿರಬಹುದು. ಆಗ ಮಗನು ಕೈ ಚಾಚಲು ತಂದೆಯು ಒಂದು ಹಾವನ್ನು ಅವನ ಕೈಗೆ ಹಾಕುತ್ತಾನೆ! ಆಗ ಮಗನಿಗೆ ಗಾಬರಿಯಾಗುವದಿಲ್ಲವೇ!

*ಚಿತ್ರಣ ಎರಡು.* ಮಗನು ಬಂದು ತಂದೆಯ ಬಳಿಯಲ್ಲಿ ಒಂದು ಮೊಟ್ಟೆಯನ್ನು ಕೇಳುತ್ತಾನೆ. ಅದು ಬೇಯಿಸಿದ ಮೊಟ್ಟೆಯಾಗಿದ್ದು, ಆ ಬಾಲಕನು ಅದನ್ನು ತನ್ನ ಬಳಿ ಇಟ್ಟುಕೊಂಡು, ಯಾವುದೇ ಸ್ಥಳದಲ್ಲಿ ಅವನಿಗೆ ಹಸಿವೆಯಾದಾಗ ತಿನ್ನಲು ಅನುಕೂಲವಾಗಿರುತ್ತದೆ. ನಾನು ಅದನ್ನು ನಿನಗೆ ಸಂತೋಷದಿಂದ ನೀಡುತ್ತೇನೆ ಎಂದು ಹೇಳಿ ತನ್ನ ಚಿಕ್ಕ ಪುಟ್ಟಿಯಿಂದ ಅದನ್ನು ತೆಗೆಯುತ್ತಾನೆ. ಇಲ್ಲದೆ ತೆಗೆದುಕೋ. ಆ ಚಿಕ್ಕ ಬಾಲಕನು ತನ್ನ ಕೈಗಳನ್ನು

ಪುಟ್ಟಿಯ ಬಳಿಗೆ ಹಾಕಿದಾಗ, ಅಲ್ಲಿ ಬಾಲವಿರುವ ಚೇಳು ಕುಟುಕಲು ಸಿದ್ಧವಾಗಿದೆ![35] ಎಂಥಾ ಭಯಾನಕವಲ್ಲವೇ!

ಮಕ್ಕಳಿಗಾಗಿ ಚಿಂತಿಸುವ ತಂದೆ, ತನ್ನ ಮಕ್ಕಳ ಕರುಣೆ ಇಲ್ಲದಂತೆ ವರ್ತಿಸುವದಿಲ್ಲ, ಅದರಂತೆ ನಮ್ಮ ಪರಲೋಕ ತಂದೆಯು ವರ್ತಿಸುವದಿಲ್ಲ. ಹಾಗಾದರೆ "ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೆ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟು ಹೆಚ್ಚಾಗಿ ಪವಿತ್ರಾತ್ಮ ವರವನ್ನು ಕೊಡುವನಲ್ಲವೇ?" ಅಂದನು (ವಚನ 13). ಈ ಹಿಂದೆ ಕರ್ತನು ಹೇಳಿರುವ ಹೇಳಿಕೆಯಲ್ಲಿ, "ತನ್ನನ್ನು ಬೇಡಿಕೊಳ್ಳುವವರಿಗೆ ತಂದೆಯು *ಎಷ್ಟೊ ಹೆಚ್ಚಾಗಿ ಒಳ್ಳೆಯ* ವರಗಳನ್ನು ಕೊಡುವನಲ್ಲವೇ ಎಂದಿರುವನು!" (ಮತ್ತಾಯ 7:11ಬಿ; ಒತ್ತಿ ಹೇಳಿದ್ದು ನನ್ನದು). ಮುಂದೆ, ಒಂದು ತಿಂಗಳ ನಂತರ, ದೇವರು ನೀಡಲಿರುವ ಒಂದು ಅತ್ಯುತ್ತಮವಾದ ವರದಾನದ ಬಗ್ಗೆ ಮುಂತಿಳಿಸಿರುವನು. ಅದು ದೇವರ ಆತ್ಮನ ವರವಾಗಿದೆ, ನಂತರ ಯಾರ್‍ಯಾರು ಆತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವರೋ ಅವರಿಗೆ ಅದನ್ನು ನೀಡಲಾಗಿತು (ಅಪೊಸ್ತಲರ ಕೃತ್ಯಗಳು 2:38). ಲಿಯೋನ್ ಮಾರಿಸ್‍ರವರು ಈ ಕುರಿತು ಬರೆದು,

> ಪರಿಶುದ್ಧಾತ್ಮನ ವರವು ಅತಿಶ್ರೇಷ್ಠವಾದ ವರದಾನ ಎಂದು ಲೂಕನು ತಿಳಿಸಿದ್ದಾನೆ. "ಕ್ಯಾರಸ್ಮಾಟಿಕ್" ವರದಾನಕ್ಕೂ, ಈ ವರದಾನಕ್ಕೂ ನಡುವೆ ವ್ಯತ್ಯಾಸವಿದೆ ರೋಮಾಪುರ ಪ್ರಕಾರ ಒಬ್ಬ ಕ್ರಿಸ್ತನ ಜೀವಿತದಲ್ಲಿ ಪವಿತ್ರಾತ್ಮನು ಸಾಮಾನ್ಯವಾಗಿ ನಿರ್ವಹಿಸುವ ಕಾರ್ಯವಾಗಿದೆ.[36]

ದೇವರು ಪ್ರತಿಯೊಂದು ಪ್ರಾರ್ಥನೆಗೂ "ಹೌದು," ಎಂದು ಉತ್ತರ ನೀಡನು ಎಂದು ಹಿಂದಿನ ಪಾಠದಲ್ಲಿ ಗಮನಿಸಿದ್ದೇವೆ. ಅದಾಗ್ಯೂ ತನ್ನ ಮಕ್ಕಳ ಸಕಲ ಪ್ರಾರ್ಥನೆಯನ್ನು ಮನ್ನಿಸುತ್ತಾನೆ. ಆತನು ಯಾವಾಗಲೂ ಉತ್ತಮವಾದದ್ದನ್ನೇ ನೀಡುತ್ತಾನೆ. ಜೀವನ ಕಾಲದಲ್ಲಿ ಅಗತ್ಯವಿರುವದನ್ನೇ ನೀಡುತ್ತಾನೆ. ಕೆಲವು ಸಂದರ್ಭದಲ್ಲಿ ಉತ್ತರವು ಸಂಬದ್ಧವಾಗಿದ್ದರೂ, ಅಂತ್ಯದಲ್ಲಿ; "ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತದೆ ಎಂದು ನಮಗೆ ಗೊತ್ತದೆ" ಎಂದು ಭರವಸವುಳ್ಳವರಾಗಿದ್ದೇವೆ (ರೋಮಾಪುರ 8:28). ಆದ್ದರಿಂದ ಸಕಾರಾತ್ಮಕವಾಗಿ ಪ್ರಾರ್ಥಿಸೋಣ!

## ಮುಕ್ತಾಯ

ಶಿಷ್ಯರು ಪ್ರಾರ್ಥನೆ ಮಾಡುವದು ಪ್ರಮುಖವಾಗಿತ್ತು. ಅವರ ಮುಂದೆ ಅವರ ಗುರುವಿನ ಗೆತ್ಸೆಮನೆಯ ಬಾಧೆಗಳು, ಚಾಟಿಯ ಏಟುಗಳು, ರಕ್ತ ಪೀ ಪಾಸಿಗಳ ನಿಂದನೆ, ಶಿಲುಬೆಯ ಭಯಾನಕ ವೇದನೆ, ಸಮಾಧಿಯ ಸ್ಥಬ್ಥತೆಗಳು ಕಾಯುತ್ತಿದ್ದವು.[37] ಈ ದಿನಗಳಲ್ಲಿ ನಾವುಗಳು ಸಹ ಕಷ್ಟ ಶೋಧನೆಗಳನ್ನು ಎದುರಿಸುತ್ತಿದ್ದೇವೆ. ಆದ್ದರಿಂದ ಹೇಗೆ ಪ್ರಾರ್ಥನೆ ಮಾಡಬೇಕೆಂದು ಕಲಿಯುವ ಅಗತ್ಯವಿದೆ. ಪ್ರಾರ್ಥನೆಯ ಬಗ್ಗೆ ಹೆಚ್ಚು ಹೇಳಬಹುದಾದ ಲೂಕ 11:1-13 ಮೂಲಕ ನಾವು ಆರಂಭಮಾಡಲು ಸಾಧ್ಯವಿದೆ:

- ಪ್ರಾರ್ಥಿಸಿರಿ: ಅದನ್ನು ಮಾಡುವದರಿಂದ ಕಲಿಯುವಿರಿ.
- ಎಡೆಬಿಡದೆ ಪ್ರಾರ್ಥಿಸಿರಿ: ಇದರಿಂದ ಯಶಸ್ವಿಯಾಗುವಿರಿ.
- ತಾಳ್ಮೆಯುಳ್ಳವರಾಗಿರ್ರಿ: ಕೇಳುವದರಿಂದ ಪಡೆಯುವಿರಿ.
- ಸಕಾರಾತ್ಮಕವಾಗಿರ್ರಿ: ಪ್ರಾರ್ಥನೆಯಿಂದ ಆಶೀರ್ವಾದ ಪಡೆಯುವಿರಿ.

ನಾವು ನಮ್ಮ ದೇವರನ್ನು, "ತಂದೆಯೆಂದು" ಕರೆಯದ ಹೊರತು ಪ್ರಾರ್ಥನೆ ಮಾಡುವದು ಅಸಾಧ್ಯ (ಲೂಕ 11:2). ನೀನು ದೇವರ ಮಗುವಾಗಿರುವೆಯಾ (ಗಲಾತ್ಯ 3:26, 27)? "ಆತ್ಮ ಹಾಗೂ ನೀರಿನಿಂದ" ಹೊಸದಾಗಿ ಹುಟ್ಟಿರುವೆಯಾ (ಯೋಹಾನ 3:5; ನೋಡಿ 1 ಪೇತ್ರ 1:23; ಅಪೊಸ್ತಲರ ಕೃತ್ಯಗಳು 2:38)? ನೀನು ಈಗಾಗಲೇ ದೇವರ ಮಗುವಾಗಿದ್ದರೆ, ಆತನಿಗೆ ಸಮೀಪವಾಗಿರುವೆಯಾ ಎಂದು ಪರಿಶೀಲಿಸಿಕೋ? ನಿನಗೂ ಮತ್ತು ದೇವರ ನಡುವೆ "ಪಾಪವು" ಅಡಚಣೆಯಾಗಿರುತ್ತವೆ (ಯೆಶಾಯ 59:1, 2). ಪಾಪದ ನಿವಾರಣೆಗಾಗಿ ದೀಕ್ಷಾಸ್ನಾನ ಮಾಡಿಸಿಕೋ (ಅಪೊಸ್ತಲರ ಕೃತ್ಯಗಳು 22:16). ಅಥವಾ ನೀನು ಬಿದ್ದು ಹೋಗಿರುವ ಕ್ರೈಸ್ತನಾಗಿದ್ದರೆ, ಆತನ ಬಳಿಗೆ ಹಿಂದಿರುಗು (ಗಲಾತ್ಯ 6:1; ಅಪೊಸ್ತಲರ ಕೃತ್ಯಗಳು 8:22; ಯಾಕೋಬ 5:16). ಹಿಂಜರಿಯದೆ, ಮುಂದೆ ಬಾ!

## ಮಾಹಿತಿ

ಲೂಕ 11:1-13 ನೇ ಭಾಗವನ್ನು ಮೆಕ್‌ಫಾಟ್ರಿಡ್ಜ್‌ರವರು "ಪ್ರಾರ್ಥನೆಯ ಮೂಲ" ಎಂದು ಕರೆದಿರುವರು.[38] "ನಿನ್ನ ಜೀವಿತದಲ್ಲಿ ಉತ್ತಮವಾದ ಪ್ರಾರ್ಥನೆಯ ಆರಂಭ" ಎಂಬ ತಲೆ ಬರಹವನ್ನು ನೀಡಬಹುದು. "ಪ್ರಾರ್ಥನಾ ಜೀವಿತದ ರಹಸ್ಯ" ಯೇಸು ತನ್ನ ಶಿಷ್ಯರಿಗೆ ಗೋಪ್ಯವಾದದ್ದನ್ನು ತಿಳಸದೆ, ಈ ಹಿಂದೆ ತಾನು ಮಾಡಿದ್ದನ್ನೇ ತಿಳಿಸಿರುವನು ಪ್ರಾರ್ಥನೆಯಲ್ಲಿ ಗ್ರಹಿಸಲಾರದ ಯಾವುದೇ ರಹಸ್ಯಗಳಿರುವದಿಲ್ಲ. ನಮಗೆ ತಿಳಿದಿರುವದನ್ನೇ ಮಾಡಲು ಆರಂಭಿಸಬೇಕು.

ಟಿಪ್ಪಣೆಗಳು

[1]ಪ್ರಾರ್ಥಿಸುವದನ್ನು "ನಮಗೆ" ಕಲಿಸು ಎಂದರೆ ಶಿಷ್ಯರೆಲ್ಲರಿಗೆ. [2]John T. Carroll and James R. Carroll, *Preaching the Hard Sayings of Jesus* (Peabody, Mass.: Hendricks on Publishers, 1996), 120. [3]F. V. McFatridge, *Lord, Teach Us to Pray* (Nashville: Broadman Press, 1956), 1. [4]ಯೇಸು ಹಿಂದೆ ತಿಳಿಸಿದ ಸಂಗತಿಗಳನ್ನೇ ಪುನರಾವರ್ತಿಸಿದನು. ಒಂದು ವೇಳೆ ಅವರು ಅದನ್ನು ಮರೆತಿರಬಹುದು. ಯೇಸುವಿನ ಪ್ರಾರ್ಥನೆಯಲ್ಲಿದ್ದ ಬಲವನ್ನು ಗಮನಿಸಿ, ಅದನ್ನು ಆತನು ಅವರಿಗೆ ತಿಳಿಸದೆ ಇದ್ದಕಾರಣ ನಮಗೆ ಕಲಿಸು ಎಂದಿರಬಹುದು. [5]"ಮಾದರಿ ಪ್ರಾರ್ಥನೆ" ಎಂಬ ವಿಚಾರವನ್ನು ಮುಂದೆ ತಿಳಿಸಲಾಗುವದು. [6]ರೋಮಾಪುರ 8:15; ಗಲಾತ್ಯ 4:6; 1 ಪೇತ್ರ 1:17 ನೋಡಿರಿ. [7]ಮೆಸ್ಸಿಯನ ರಾಜ್ಯದ ಸ್ಥಾಪನೆ ಪ್ರಮುಖವಾಗಿತ್ತು ಮರಣ ಪುನರುತ್ಥಾನದ ನಂತರ ಪಂಚಾಶತಮದಿದಂದು ಅದು ಸಾಭೀತಾಯಿತು (ಮಾರ್ಕ 9:1; ಅಪೊಸ್ತಲರ ಕೃತ್ಯಗಳು 1:8; 2:1-4). [8]"ಸಾಲ" ಅಂದರೆ, "ಪಾಪದ ಸಾಲ" ಎಂಬ ಅರ್ಥ ನಮಗೆ ವಿರೋಧವಾಗಿ ಪಾಪಮಾಡಿರುವವರ ಬಗ್ಗೆ. [9]McFatridge, 40. [10]Ibid., 47.

[11]William Barclay ಯವರು ನೀಡಿರುವ ಸಾರಾಂಶ *The Gospel of Luke,* rev. ed., The Daily Study Bible Series (Philadelphia: Westminster Press, 1975), 144. [12]From Alfred, Lord Tennyson, "Morte D'Arthur," *Great Poems of the English Language*, comp. Wallace Alvin Briggs (New York: Tudor, 1933), 795. [13]Richard Foster, *Prayer: Finding the Heart's True Home* (San Francisco: Harper, 1992), quoted in Carroll and Carroll, 122, 127. [14]"ಅದನ್ನು ಮಾಡು" ಎಂಬ ಅಮೇರಿಕೆಯ ಪಾದರಕ್ಷಣೆಯ ಹೇಳಿಕೆ. [15]Joseph M. Scriven, "What a Friend We Have in Jesus," *Songs of Faith and Praise,* comp. and ed. Alton H. Howard (West Monroe, La.: Howard Publishing Co., 1994). [16]ಅಡೆತಡೆ ಇದ್ದದ್ದರಿಂದ ಆ ವಿಶ್ರಾಂತಿ ಗ್ರಹಕ್ಕೆ ಸ್ನೇಹಿತನನ್ನು ಕಳುಹಿಸಲಿಲ್ಲ. [17]ನಾನಿರುವ ಪ್ರದೇಶದಲ್ಲಿ "ತಮಾಷೆಗಾಗಿ, ವಾಹದ ದಟ್ಟಣೆ" ಎನ್ನುತ್ತೇವೆ. [18]ನರ್ಸರಿ ಹಾದಿನಂತೆ, ಲೈಕ್‌ಮದರ್ ಹುಬ್ಬಾರ್ಡ್ ಕಬೋರ್ಡ್, ಹಿಸ್ ವಾಸ್‌ಬೇರ್. [19]"ರಾತ್ರಿ ಎಲ್ಲದರ" ಕಥೆ. [20]ಹಗಲಿನಲ್ಲಿ ಬಾಗಿಲು ಕಿಟಕಿಗಳು

ತೆರೆದಿದ್ದರೆ, ರಾತ್ರಿಕಾಲದಲ್ಲಿ ಮುಚ್ಚುತ್ತಿದ್ದರು.

[21]ಪ್ರಾಯೋಗಿಕವಾಗಿ, ಮೈಕಿನ ಸ್ಟಾಂಡ್‌ನ್ನು ತಟ್ಟಬಹುದು. ಅದು ತಟ್ಟುವ ವಿಚಾರವಾಗಿರದೆ, ಅದನ್ನು ಜೀವಿತಕ್ಕೆ ಅಳವಡಿಸಿಕೊಳ್ಳಬೇಕು (ಲೂಕ 11:9, 10). [22]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 480. [23]ಅಮೇರಿಕೆಯಲ್ಲಿ, "ದಿ ಫ್ಲೋರ್ ವಾಸ್ ಡೋರ್ ಟು ಡೋರ್" ಎನ್ನುತ್ತಾರೆ. ಇತರೆ ವಿವರಣೆಯಂತೆ, ಜನರು ಎತ್ತರದ ನೆಲದ ಮೇಲೆ ಮಲಗುತ್ತಿದ್ದರು, ಅದು ಈ ಸಾಮ್ಯಕ್ಕೆ ಸಮಂಜಸವಲ್ಲ. ಚಳಿಗಾಲದಲ್ಲಿ ಪ್ರಾಣಿಗಳನ್ನು ಸಹ ಮನೆಯ ಒಳಗೆ ಕೂಡಿಡುತ್ತಿದ್ದರು. ಆದ್ದರಿಂದ ಮಲಗಿದ್ದ ಮನುಷ್ಯನು ತಳಮಳಗೊಂಡಿರಬಹುದು. [24]ನೋ ಕ್ಲಾಪ್ - ಆನ್ - ಕ್ಲಾಪ್ - ಆಫ್ ಲ್ಯಾಂಪ್ಸ್ ಎಂಬ ಅಮೇರಿಕೆಯ "ನುಡಿ." [25]ಬಾಬ್ ಲಾಯನ್ಸ್‌ರವರ ಪದಗಳು. "ತಾಯಿ ಸಂತೋಷವಾಗಿರದಿದ್ದರೆ, ಬೇರೆಯಾರು ಸಂತೋಷವಾಗಿರಲಾರರು." [26]Chris Bullard, "How to Be an Intercessor," sermon preached at the Overland Park church of Christ, Overland Park, Kansas, 13 May 1985. [27]ಮಕ್ಕಳು ಬಾಯಿ ಪಾಠ ಮಾಡಿದ ಪ್ರಾರ್ಥನೆ. [28]*ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕದಲ್ಲಿ "ಎರಡು ಮಾರ್ಗಗಳು" ಎಂಬ ಪಾಠಬ ನೋಡಿ. [29]"ಎಂದಿಗೂ, ಎಂದಿಗೂ" ಬಿಟ್ಟು ಕೊಡಬೇಡ ಎಂಬ ಚರ್ಚ್‌ಹಿಲ್‌ರವರ ಪ್ರಾರ್ಥನೆ. [30]"ಒತ್ತಾಯಿಸು" ಎಂಬ ಅನುವಾದ ಇರುವದಿಲ್ಲ.

[31]ವಾಹನ ದಟ್ಟಣೆ ಇರುವ ಸ್ಥಳದಲ್ಲಿ ಆಟವಾಡ ಬಹುದೇ? ಕೇವಲ ಕೇಕ್ ಮತ್ತು ಐಸ್ ಕ್ರೀಮನ್ನು ಮಾತ್ರ ತಿನ್ನಬಹುದೇ? ಒಂದು ವೇಳೆ ನಿಮ್ಮ ಮಕ್ಕಳ ಮನವಿಯನ್ನು ಮನ್ನಣೆ ಮಾಡದಿರಬಹುದು. [32]ಹೆಚ್ಚಿನ ಚರ್ಚೆಗೆ ಸ್ಥಳಾವಕಾಶವಿಲ್ಲ. "ದೇವರು ತಡಮಾಡಿದರೂ, ನೀಡದೆ ಇರುವದಿಲ್ಲ." [33]ಪ್ರತಿಯೊಬ್ಬನು ತನ್ನ ಪಾಪದ ನಿಮಿತ್ತ ದೇವರಿಂದ ದೂರವಾಗಿದ್ದಾನೆ (ರೋಮಾಪುರ 3:23; 6:23). [34]ಈ ವಿಧವಾದ ಮೀನನ್ನು ಯೇಸು 5,000 ಜನರಿಗೆ ನೀಡಿದ್ದನು. [35]ತಂದೆಯ ತನ್ನ ಮಕ್ಕಳಿಗೆ ಮೋಸ ಮಾಡಬಹುದೇ ಎಂಬ ತರ್ಕ. ಚಿಕ್ಕ ಮೀನು ಹಾವಿನಂತೆ, ಸುತ್ತಿಕೊಂಡ ಒಂದು ಚೇಳು ಮೊಟ್ಟೆಯಂತಿರಬಹುದು. ಯೇಸು ರೊಟ್ಟಿ ಮತ್ತು ಕಲ್ಲಿನ ನಿದರ್ಶನವನ್ನು ನೀಡಿರುವನು (ಮತ್ತಾಯ 7:9). ಚಕ್ರದಂತಿರುವ ಕಲ್ಲು ರೊಟ್ಟಿಯಂತಿರಬಹುದು. [36]ಅಯೋನ್ ಮಾರಿಸ್, ದೀಕ್ಷಾಸ್ನಾನ ಹೊಂದಿದವರೆಲ್ಲರೂ, ವರದಾನವನ್ನು ಪಡೆಯಲು ಅರ್ಹರಿರುವಾಗ, ವರಕ್ಕಾಗಿ ಏಕೆ ಕೇಳಬೇಕು? ನಂಬಿಗಸ್ತರಿಗೆ, ಅವಶ್ಯವಾದದ್ದನ್ನು ದೇವರು ನೀಡಲು ಬಯಸುವದಾದರೂ (ಮತ್ತಾಯ 6:33) ದೈನಂದಿನ ಆಹಾರಕ್ಕಾಗಿ ಕೇಳುವದರಲ್ಲಿ ಯಾವುದೇ ಪ್ರಮಾದವಿರುವದಿಲ್ಲ (ಮತ್ತಾಯ 6:11). [37]McFatridge, 3ರಿಂದ ಆರಿಸಿ ಕೊಂಡಿದೆ. [38]McFatridge, 5.